೫) ಕರ್ನಾಟಕ ಗ್ರಾಮ ಹುಂಡ್ದೆಗಳನ್ನು ತೊಡೆದು ಹಾಕುವ (ತಿದ್ದುಪಡಿ) ವಿಧೇಯಕ ೧೯೮೬.

ಪರ್ಯಾಲೋಚನ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಆಹಾರ ಸಚಿವರು).—ಮಾನ್ಯ ಅಧ್ಯಕ್ಷರೇ ಕರ್ನಾಟಕ ಗ್ರಾಮ ಹುಂಡ್ದೆಗಳನ್ನು ತೊಡೆದು ಹಾಕುವುದು (ತಿದ್ದುಪಡಿ)ವಿಧೇಯಕ ೧೯೮೬ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಆಹಾರ ಸಚಿವರು) —ಮಾನ್ಯ ಅಧ್ಯಕ್ಷರೇ ಹಿಂದೆ ಇದ್ದ ಕಾನೂನು ಪ್ರಕಾರ ಕ್ರಾಪ್ ಲೋನ್ ಸಿಗುವುದಿಲ್ಲ. ಆದ್ದರಿಂದ ಬ್ಯಾಂಕ್‌ಗಳಲ್ಲಿ ಮತ್ತು ಸೊಸೈಟಿಗಳಲ್ಲಿ ಕ್ರಾಪ್ ಲೋನ್ ಕೊಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೇನೆ, ಆದ್ದರಿಂದ ದಯ ಮಾಡಿ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ವಿನಂತಿ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಕರ್ನಾಟಕ ಗ್ರಾಮ ಹುಂಡ್ದೆಗಳನ್ನು ತೊಡೆದು ಹಾಕುವ (ತಿದ್ದುಪಡಿ) ವಿಧೇಯಕ ೧೯೮೬ನ್ನು ಪರ್ಯಾಲೋಚಿಸುವುದು,''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨

ಅಧ್ಯಕ್ಷರು.—ಖಂಡ ೨ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ೨ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

ಮೊದಲನೆಯ ಖಂಡ ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮಂತ್ರಿ ಆಹಾರ ಸಚಿವರು).—''ಕರ್ನಾಟಕ ಗ್ರಾಮ ಹುಂಡ್ದೆಗಳನ್ನು ತೊಡೆದು ಹಾಕುವುದು (ತಿದ್ದುಪಡಿ) ವಿಧೇಯಕ ೧೯೮೬ ಅನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು,

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಕರ್ನಾಟಕ ಗ್ರಾಮ ಹುಂಡ್ದೆಗಳನ್ನು ತೊಡೆದು ಹಾಕುವ ತಿದ್ದುಪಡಿ) ವಿಧೇಯಕ ೧೯೮೬ನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು.